# <u>ಕರ್ನಾಟಕ ಲೋಕಾಯುಕ್ತ</u>

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.2068/2016

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 5.5.2018.
16

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ</u>

ವಿಷಯ: ಸರ್ಕಾರಿ ನೌಕರರಾದ ಶ್ರೀ. ಪದ್ಮನಾಭ.ವಿ.ಸಾಲ್ಯಾನ್, ಪ್ರಭಾರಿ ಪಿಡಿಒ, ಸಂಗಬೆಟ್ಟು ಗ್ರಾಮಪಂಚಾಯತಿ, ಬಂಟ್ವಾಳ ತಾಲ್ಲೂಕು, ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ. ಜಿನಚಂದ್ರ ಜೈನ್, ಸಂಗಬೆಟ್ಟು ಗ್ರಾಮದ ನಿವಾಸಿ, ಬಂಟ್ವಾಳ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ. ಪದ್ಮನಾಭ.ವಿ.ಸಾಲ್ಯಾನ್, ಪ್ರಭಾರಿ ಪಿಡಿಒ, ಸಂಗಬೆಟ್ಟು ಗ್ರಾಮಪಂಚಾಯತಿ, ಬಂಟ್ವಾಳ ತಾಲ್ಲೂಕು, (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **<u>ದೂರಿನ ಸಂಕ್ಷಿಪ್ತ ವಿವರಣೆ:-</u>**

ದೂರುದಾರರ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ ಶ್ರೀ.ರತ್ನಕುಮಾರ್ ಚೌಟ ಎಂಬುವರು ಸರ್ಕಾರಿ ಸ್ಥಳವನ್ನು ಅತಿಕ್ರಮಿಸಿ ಸಾರ್ವಜನಿಕ ರಸ್ತೆಗೆ ತಡೆಒಡ್ಡಿದ ಬಗ್ಗೆ ದಿ:04.07.2015ರಂದು ಎದುರುದಾರರಿಗೆ ದೂರು ನೀಡಿದ್ದು, ಕಂದಾಯ ನಿರೀಕ್ಷಕರು ವಿವಾದಿತ ಸ್ಥಳಕ್ಕೆ ಭೇಟಿ ಮಾಡಿ ಸ್ಥಳ ಪರಿಶೀಲನೆ ಮಾಡಿದ ನಂತರ, ಸದರಿ ರತ್ನಕುಮಾರ್‌ರವರು ಶೆಡ್ ನಿರ್ಮಿಸಲು ಎದುರುದಾರರು ಹಳೆ

ಮನೆ ದುರಸ್ತಿ ಎಂದು ಪರವಾನಗಿ ನೀಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ದೂರಿನ ಜೊತೆ ಸದರಿ ಸ್ಥಳದ ನಕ್ಷೆ, ಹಿಂಬರಹ, ಆರ್.ಟಿ.ಸಿ., ಚಲನ್, ಮಜರ್ ಮತ್ತು ಇತರೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

3. ಸದರಿ ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆ ಕೋರಲಾಗಿ ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ಸಂಗಬೆಟ್ಟು ಗ್ರಾಮದ ಸರ್ವೆ ನಂ.321ರಲ್ಲಿರುವ ಮನೆ (ಮನೆ ನಂ.174) ರತ್ನಕುಮಾರ ಚೌಟ ಇವರ ಹೆಸರಿನಲ್ಲಿದ್ದು ಅವರು ಅದನ್ನು ದುರಸ್ತಿ ಪಡಿಸಲು ಪಂಚಾಯಿತಿಯಿಂದ ಪರವಾನಗಿ ಕೋರಿ ದಿ:10.12.2014ರಂದು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸಭಾ ನಿರ್ಣಯದಂತೆ ಮನೆ ದುರಸ್ತಿಗೆ ಪರವಾನಗಿ ನೀಡಲಾಗಿರುತ್ತದೆ. ಸದರಿಯವರು ಅರ್ಜಿದಾರರಿಗೆ ಮತ್ತು ಸಾರ್ವಜನಿಕ ರಸ್ತೆಗೆ ಅಡ್ಡಿ ಪಡಿಸಿದ್ದು ಮತ್ತು ಅರ್ಜಿದಾರರ ಸ್ವಾಧೀನದ ಆಸ್ತಿಯಲ್ಲಿ ಶೆಡ್ ನಿರ್ಮಿಸುತ್ತಿರುವುದಾಗಿ ತಿಳಿಸಿರುವುದು ನಿಜವಿರುವುದಿಲ್ಲ. ಸದರಿ ಕಟ್ಟಡದಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗಿರುವುದಿಲ್ಲ. ಇದರಲ್ಲಿ ತನ್ನದು ಕರ್ತವ್ಯಲೋಪವಿಲ್ಲವೆಂದು ಹೇಳಿದ್ದಾರೆ.

4. ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೋಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ, ಮಂಗಳೂರುರವರನ್ನು ಕೇಳಲಾಗಿ, ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ, ಮಂಗಳೂರುರವರು ವರದಿ ಸಲ್ಲಿಸಿದ್ದು, ಸದರಿಯವರು ತಮ್ಮ ವರದಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸಂಗನಬೆಟ್ಟು ಗ್ರಾಮದ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಕರಣಿಕರನ್ನು ಕಳುಹಿಸಿಕೊಡುವಂತೆ ಬಂಟ್ವಾಳ ತಾಲ್ಲೂಕು ತಹಶೀಲ್ದಾರ್‌ರವರಿಗೆ ದಿ:09.03.2017ರಂದು ಕೋರಿಕೆ ಪತ್ರ ನೀಡಿ, ಸಂಗನಬೆಟ್ಟು ಗ್ರಾಮದ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಕರಣಿಕರನ್ನು ಕಳುಹಿಸಿದ್ದು ನಂತರ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು ಒಬ್ಬ ಇಂಜಿನಿಯರ್‌ರವನ್ನು ಕಳುಹಿಸಿಕೊಡುವಂತೆ ಕೋರಿದ್ದು ಅದರಂತೆ ಒಬ್ಬ ಇಂಜಿನಿಯರ್‌ರವರನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿ ಶೆಡ್ ಇರುವ ಸ್ಥಳವನ್ನು ಸರ್ವೆಯರ್ ಮೂಲಕ ಗಡಿಗುರುತು ಮಾಡಿಕೊಂಡು

ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಕರಣಿಕರು ಸ್ಥಳ ಪರಿಶೀಲನೆ ಮಾಡಿ ರತ್ನಕರ ಚೌಟ ಎಂಬುವರು ನಿರ್ಮಿಸಿರುವ ಶೆಡ್ ಸರ್ವೆ ನಂ.114ರಲ್ಲಿ ಇರುವುದು ಕಂಡುಬಂದಿರುತ್ತದೆ. ಅದೇ ರೀತಿ ಸದರಿ ಶೆಡ್ ಸರ್ಕಾರಿ ಜಮೀನು ಸರ್ವೆ ನಂ.114ರಲ್ಲಿ ಇರುವುದಾಗಿ ಬಂಟ್ವಾಳ ತಹಶೀಲ್ದಾರ್‌ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಅದೇ ರೀತಿ ಸದರಿಯವರು ಸರ್ಕಾರಿ ಜಮೀನಿನಲ್ಲಿ ಹೊಸ ಮನೆ ನಿರ್ಮಾಣ ಮಾಡಿರುವುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಅದೇ ರೀತಿ ಸದರಿ ಮನೆಗೆ ಅಳವಡಿಸಿರುವ ಡೋರ್ ನಂ. ಈ ಸರ್ವೆ ನಂ. 76 /1ರಲ್ಲಿದ್ದ ಮನೆಯ ಡೋರ್ ನಂಬರನ್ನು ಸರ್ವೆ ನಂ.321ರ ಜಮೀನು ಎಂದು ತಿಳಿಸಿ ಸರ್ಕಾರಿ ಜಮೀನು ಸರ್ವೆ ನಂ.114ರಲ್ಲಿ ನಿರ್ಮಿಸಿರುವ ಶೆಡ್‌ಗೆ ನೀಡಿರುವುದು ಕಂಡುಬಂದಿರುವುದಾಗಿಯೂ, ಅಲ್ಲದೇ ಹೊಸ ಶೆಡ್ ನಿರ್ಮಿಸುವಾಗ ಹಳೆ ಮನೆ ದುರಸ್ತಿ ಎಂದು ಕಾನೂನು ಬಾಹಿರವಾಗಿ ಪರವಾನಗಿಯನ್ನು ಎದುರುದಾರರು ನೀಡಿರುವುದಾಗಿ ಸದರಿ ಗ್ರಾಮ ಪಂಚಾಯಿತಿಯಲ್ಲಿ ಪ್ರಸ್ತುತ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ನೀಡಿದ ಮಾಹಿತಿಯಲ್ಲಿ ಸ್ಪಷ್ಟವಾಗುತ್ತದೆ ಎಂದು ತಮ್ಮ ವರದಿಯಲ್ಲಿ ತಿಳಿಸಿ ಪೂರಕ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

5. ಸದರಿ ತನಿಖಾಧಿಕಾರಿಗಳ ವರದಿ ಮೇಲೆ ಎದುರುದಾರರಿಂದ ಆಕ್ಷೇಪಣೆ ಕೇಳಲಾಗಿ ಎದುರುದಾರರು ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

6. ದೂರುದಾರರ ದೂರು, ಬಂಟ್ವಾಳ ತಹಶೀಲ್ದಾರ್‌ರವರ ವರದಿ, ತನಿಖಾಧಿಕಾರಿಗಳ ವರದಿ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸುವುದೇನೆಂದರೆ ಅಂದರೆ ಶ್ರೀ.ರತ್ನಕುಮಾರ್ ಚೌಟ ಎಂಬುವರು ಸರ್ಕಾರಿ ಸ್ಥಳವನ್ನು ಅತಿಕ್ರಮಿಸಿ ಸಾರ್ವಜನಿಕ ರಸ್ತೆಗೆ ತಡೆಒಡ್ಡಿದ ಬಗ್ಗೆ ದಿ:04.07.2015ರಂದು ಎದುರುದಾರರಿಗೆ ದೂರು ನೀಡಿದ್ದು, ಕಂದಾಯ ನಿರೀಕ್ಷಕರು ವಿವಾದಿತ ಸ್ಥಳಕ್ಕೆ ಭೇಟಿ ಮಾಡಿ ಸ್ಥಳ ಪರಿಶೀಲನೆ ಮಾಡಿದ ನಂತರ, ಸದರಿ ರತ್ನಕುಮಾರ್‌ರವರು ಶೆಡ್ ನಿರ್ಮಿಸಲು ಎದುರುದಾರರು ಹಳೆ ಮನೆ ದುರಸ್ತಿ ಎಂದು ಪರವಾನಗಿ ನೀಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಂಗಬೆಟ್ಟು ಗ್ರಾಮದ ಸರ್ವೆ ನಂ.321ರಲ್ಲಿರುವ

ಮನೆ (ಮನೆ ನಂ.174) ರತ್ನಕುಮಾರ ಚೌಟ ಇವರ ಹೆಸರಿನಲ್ಲಿದ್ದು ಅವರು ಅದನ್ನು ದುರಸ್ತಿ ಪಡಿಸಲು ಪಂಚಾಯಿತಿಯಿಂದ ಪರವಾನಗಿ ಕೋರಿ ದಿ:10.12.2014ರಂದು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸಭಾ ನಿರ್ಣಯದಂತೆ ಮನೆ ದುರಸ್ತಿಗೆ ಪರವಾನಗಿ ನೀಡಲಾಗಿರುತ್ತದೆ. ಸದರಿಯವರು ಅರ್ಜಿದಾರರಿಗೆ ಮತ್ತು ಸಾರ್ವಜನಿಕ ರಸ್ತೆಗೆ ಅಡ್ಡಿ ಪಡಿಸಿದ್ದು ಮತ್ತು ಅರ್ಜಿದಾರರ ಸ್ವಾಧೀನದ ಆಸ್ತಿಯಲ್ಲಿ ಶೆಡ್ ನಿರ್ಮಿಸುತ್ತಿರುವುದಾಗಿ ತಿಳಿಸಿರುವುದು ನಿಜವಿರುವುದಿಲ್ಲ. ಸದರಿ ಕಟ್ಟಡದಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗಿರುವುದಿಲ್ಲ. ಇದರಲ್ಲಿ ತನ್ನದು ಕರ್ತವ್ಯಲೋಪವಿಲ್ಲವೆಂದು ಹೇಳಿದ್ದಾರೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಸಂಗನಬೆಟ್ಟು ಗ್ರಾಮದ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಕರಣಿಕರನ್ನು ಒಬ್ಬ ಇಂಜಿನಿಯರ್‌ರವರನ್ನು ಕರೆದುಕೊಂಡು ವಿವಾದಿತ ಸ್ಥಳ ಪರಿಶೀಲನೆ ಮಾಡಿ ಶೆಡ್ ಇರುವ ಸ್ಥಳವನ್ನು ಸರ್ವೆಯರ್ ಮೂಲಕ ಗಡಿಗುರುತು ಮಾಡಿಕೊಂಡು ರತ್ನಕರ ಚೌಟ ಎಂಬುವರು ನಿರ್ಮಿಸಿರುವ ಶೆಡ್ ಸರ್ವೆ ನಂ.114ರಲ್ಲಿ ಇರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ಅದೇ ರೀತಿ ಸದರಿ ಶೆಡ್ ಸರ್ಕಾರಿ ಜಮೀನು ಸರ್ವೆ ನಂ.114ರಲ್ಲಿ ಇರುವುದಾಗಿ ಬಂಟ್ವಾಳ ತಹಶೀಲ್ದಾರ್‌ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಅದೇ ರೀತಿ ಸದರಿಯವರು ಸರ್ಕಾರಿ ಜಮೀನಿನಲ್ಲಿ ಹೊಸ ಮನೆ ನಿರ್ಮಾಣ ಮಾಡಿರುವುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಅದೇ ರೀತಿ ಸದರಿ ಮನೆಗೆ ಅಳವಡಿಸಿರುವ ಡೋರ್ ನಂ. ಈ ಸರ್ವೆ ನಂ. 76/1ರಲ್ಲಿದ್ದ ಮನೆಯ ಡೋರ್ ನಂಬರನ್ನು ಸರ್ವೆ ನಂ.321ರ ಜಮೀನು ಎಂದು ತಿಳಿಸಿ ಸರ್ಕಾರಿ ಜಮೀನು ಸರ್ವೆ ನಂ.114ರಲ್ಲಿ ನಿರ್ಮಿಸಿರುವ ಶೆಡ್‌ಗೆ ನೀಡಿರುವುದು ಕಂಡುಬಂದಿರುವುದಾಗಿಯೂ, ಅಲ್ಲದೇ ಹೊಸ ಶೆಡ್ ನಿರ್ಮಿಸುವಾಗ ಹಳೆ ಮನೆ ದುರಸ್ತಿ ಎಂದು ಕಾನೂನು ಬಾಹಿರವಾಗಿ ಪರವಾನಗಿಯನ್ನು ಎದುರುದಾರರು ನೀಡಿರುವುದಾಗಿ ಸದರಿ ಗ್ರಾಮ ಪಂಚಾಯಿತಿಯಲ್ಲಿ ಪ್ರಸ್ತುತ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ನೀಡಿದ ಮಾಹಿತಿಯಲ್ಲಿ ಸ್ಪಷ್ಟವಾಗುತ್ತದೆ. ಬಂಟ್ವಾಳ ತಾಲ್ಲೂಕು ಸಂಗಬೆಟ್ಟು ಗ್ರಾಮದ ಸರ್ವೆ ನಂ.114ರಲ್ಲಿ ಅಕ್ರಮ ಸಕ್ರಮದಡಿ 2 ಎಕರೆ 90 ಗುಂಟೆ ಜಮೀನು ಮಂಜೂರಾತಿಯಾಗಿ ಪ್ಲಾಟಿಂಗ್ ಆಗಿದ್ದು ಸರ್ವೆ ನಂ.321ರಲ್ಲಿ 2 ಎಕರೆ 93 ಎಂಬುದು ರತ್ನಕುಮಾರ್

ಚೌಟ ಬಿನ್ ಸಂಜೀವ್ ಚೌಟರವರ ಹೆಸರಿನಲ್ಲಿ ಪಹಣಿ ದಾಖಲಾಗಿರುತ್ತದೆ. ಸದರಿಯವರು ಕಟ್ಟಡವನ್ನು ಸರ್ವೆ ನಂ.114 ಹಿಲ್ ಬ್ಲಾಕ್ ನಂಬರ್ ಪಹಣಿಯಂತೆ ಸರ್ಕಾರಿ ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ರತ್ನಕುಮಾರ್ ಚೌಟ ಎಂಬುವರು ಅಧಿಕೃತವಾಗಿ ಮನೆ ನಿರ್ಮಿಸಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಬಂಟ್ವಾಳ ತಹಸೀಲ್ದಾರ್‌ರವರು ಸಹ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ರತ್ನಕುಮಾರ್ ಚೌಟ ಎಂಬುವರು ಸರ್ವೆ ನಂ.114ರ ಸರ್ಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿದ್ದು, ಈ ಹಿಂದೆ ಸರ್ವೆ ನಂ.76/ 1 ರಲ್ಲಿ ಇದ್ದ ಮನೆಯ ಡೋರ್ ನಂಬರನ್ನು ಸರ್ವೆ ನಂ.321ರ ಜಮೀನು ಎಂದು ತಿಳಿಸಿ, ಸರ್ಕಾರಿ ಜಮೀನಿನ ಸರ್ವೆ ನಂ.114ರಲ್ಲಿ ನಿರ್ಮಿಸಿರುವ ಮನೆಗೆ ಕಾನೂನು ಬಾಹಿರವಾಗಿ ಎದುರುದಾರರು ಪರವಾನಗಿ ನೀಡಿರುವುದು ಕಂಡುಬಂದಿರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಸಂಗಬೆಟ್ಟು ಗ್ರಾಮದ ರತ್ನಕುಮಾರ್ ಚೌಟರವರು ಸರ್ಕಾರಿ ಜಮೀನು ಸರ್ವೆ ನಂ.114ರಲ್ಲಿ ನಿರ್ಮಿಸಲಾದ ಅನಧಿಕೃತ ಶೆಡನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/5/18

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.